ಗೃಹಮಂಡಲಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗತದ ಎಎಿದ ಯೋಜನೆಯಡಿಯಲ್ಲಿ ವಸತಿ

218 - ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್, (ಯಲಹಂಕ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿ ಅಸ್ತಿತ್ವಕ್ಕೆ ಬಂದಾಗಿ ವಿವಿಧ ಯೋಜನೆಗಳಲ್ಲಿ ಎಷ್ಟೆಷ್ಟು ವಸತಿಗಳನ್ನು ಯಾವ ಯಾವ ವರ್ಗಕ್ಕೆ ನೀಡಲಾಗಿದೆ.

ಆ) ಈ ರೀತಿ ವಸತಿ ಒದಗಿಸುವ ಸಮಯದಲ್ಲಿ ಶೇಕಡ 18ರ ಮನೆಗಳನ್ನು ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ, ಒದಗಿಸಲು ಅವಕಾಶ ಮಾಡಲಾಗಿದೆಯೇ?

ಇ) ಆ ರೀತಿ ಅವಕಾಶ ಮಾಡಿದ್ದರೆ, ಯಾವ ಪ್ರಮಾಣದಲ್ಲಿ ಆ ವಸತಿಗಳು ಒದಗಿಸಲ್ಪಟ್ಟಿವೆ.

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯು ಸಸ್ತಿತ್ವಕ್ಕೆ ಬಂದಾಗಿನಿಂದ ವಿವಿಧ ಯೋಜನೆಗಳಲ್ಲಿ ಇದುವರೆವಿಗೂ ಸುಮಾರು ಒಟ್ಟು 96,505 ಮನೆಗಳನ್ನು ನಿರ್ಮಿಸಿದ್ದು ಅವುಗಳನ್ನು ಹಂಚಿಕೆ ಮಾಡುವಾಗ ಮಂಡಳಿ ಹಂಚಿಕಾತಿ ನಿಯಮಾವಳಿ ಪ್ರಕಾರ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಶೇಕಡ 18 ರಷ್ಟು ರಕ್ಷಣಾ ವರ್ಗದವರಿಗೆ ಶೇಕಡ 3ರಷ್ಟು ಕೇಂದ್ರ ಸರ್ಕಾರಿ ನೌಕರರಿಗೆ ಶೇಕಡ 5 ರಷ್ಟು ರಾಜ್ಯ ಸರ್ಕಾರಿ ನೌಕರರಿಗೆ ಶೇಕಡ 15 ರಷ್ಟು ಅಂಗವಿಕಲರಿಗೆ ಶೇಕಡ 2 ರಷ್ಟು ಹಾಗೂ ಸಾರ್ವಜನಿಕರಿಗೆ ಶೇಕಡ 55 ರಂತೆ ಹಂಚಿಕಾತಿ ಮಾಡಲಾಗಿದೆ.

ಆ) ಹೌದು

ಇ) ಹಂಚಿಕೆ ಮಾಡುವಾಗ ಅರ್ಹ ಅರ್ಜಿದಾರರುಗಳ ಲಭ್ಯತೆಗೆ ಒಳಪಟ್ಟ ಪ್ರತಿಯೋಜನೆಯಲ್ಲಿ 18 ಪ್ರತಿಶತ ಮನೆಗಳನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಪಂಗಡದವರಿಗೆ ಹಂಚಿಕೆ ಮಾಡಲಾಗಿದೆ.

ದಿನಗೂಲಿ ನೌಕರರ ಬಗ್ಗೆ

78 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರಪಾಲಿಕೆಯಲ್ಲಿ ದಿನಗೂಲಿ ನೌಕರರು 10 ವರ್ಷ ಸೇವೆ ಸಲ್ಲಿಸಿರುವವರನ್ನು ಇನ್ನು ಖಾಯಂ ಆಗದೆ ಇರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಶೀಘ್ರ ಕ್ರಮ ಕೈಗೊಂಡು ಸದರಿ ನೌಕರರನ್ನು ಖಾಯಂಗೊಳಿಸುವರೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ: ವನಇ 30 ಎಸ್‌ಬಿಸಿ 93, ದಿನಾಂಕ 9-3-94ರನ್ವಯ ಶಿವಮೊಗ್ಗ-ಭದ್ರಾವತಿ ಮಹಾನಗರಪಾಲಿಕೆಯ 349 ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.